ಅ) ಸದಸ್ಯರೇತರಿಗೆ ನಿವೇಶನಗಳನ್ನು ಹಂಚಲಾಗಿದೆಯೇ?

ಇ) ಹಾಗಿದ್ದಲ್ಲಿ ಸದಸ್ಯರೇತರರಿಗೆ ನಿವೇಶನ ಹಂಚಲು ಸಂಘವು ಅನುಸರಿಸಿರುವ ಮಾನ ಕಂಡವೇನು?

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು) :

ಅ) 2089 ನಿವೇಶನಗಳನ್ನು ಸದಸ್ಯರಿಗೆ ಹಂಚಲಾಗಿದೆ. ನಿವೇಶನದಾರರ ಪಟ್ಟಿಯನ್ನು ಸಹಕಾರ ಸಂಘಗಳ ನಿಬಂಧಕರಿಂದ ಅಥವಾ ಸಂಬಂಧಿಸಿದ ಸಂಘದಿಂದ ಪಡೆಯಬಹುದಾಗಿದೆ. ನಿವೇಶನ ಹಂಚಿಕೆಯಾದ ಯಾವುದೇ ಸದಸ್ಯರ ಬಗ್ಗೆ ನಿರ್ದಿಷ್ಟ ಮಾಹಿತಿ ಬೇಕಾಗಿದ್ದಲ್ಲಿ ಅದನ್ನು ಒದಗಿಸಲಾಗುವುದು.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಉದ್ಯಾನವನಗಳ ನಿರ್ಮಾಣ

775(1299) ಶ್ರೀ ಕೆ.ಎನ್. ಸುಬ್ಬಾರೆಡ್ಡಿ (ಬಸವನಗುಡಿ) : ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ರಾಜ್ಯದಲ್ಲಿ ಉದ್ಯಾನವನವನ್ನು ನಿರ್ಮಾಣ ಮಾಡಲು ಸರ್ಕಾರ ಮೀಸಲಿಟ್ಟ ಹಣವೆಷ್ಟು?

ಆ) ಎಷ್ಟು ಉದ್ಯಾನವನವನ್ನು ಪುನರ್ ನಿರ್ಮಾಣಕ್ಕೆ ಸರ್ಕಾರ ನಿರ್ಧರಿಸಿದೆ. (ಜಿಲ್ಲಾವಾರು ವಿವರ ನೀಡುವುದು)

ಶ್ರೀ ಎಂ. ಶಿವಣ್ಣ (ತೋಟಗಾರಿಕೆ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ನುಸಿಪೀಡೆ ಔಷಧಿಗಾಗಿ ಖರ್ಚು ಮಾಡಿದ ಮೊತ್ತ

776(942) ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) : ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ನುಸಿಪೀಡೆ ರೋಗದ ಔಷಧಿಗಾಗಿ ಸರ್ಕಾರವು ಈ ತನಕ ಖರ್ಚು ಮಾಡಿದ ಮೊತ್ತ ಎಷ್ಟು?

ಆ) ಪ್ರಕೃತ ಈ ಔಷಧಿಯನ್ನು ಸರ್ಕಾರವು ಸಿಂಪರಣೆ ಕಾರ್ಯದಿಂದ ಹಿಂದಕ್ಕೆ ಪಡೆಯಲು ಕಾರಣವೇನು?

ಇ) ಔಷಧಿಯನ್ನು ಯಾವ ಆಧಾರದಲ್ಲಿ ಪರಿಣಾಮಕಾರಿಯಲ್ಲವೆಂಬುದಾಗಿ ಸರ್ಕಾರವು ನಿರ್ಧರಿಸಿದೆ?